ಪ್ರಾಸಾ-1 ರವರನ್ನು ಪುನಃ ಕರೆಯಿಸಿ ದಿಃ 07.11.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ ವಕೀಲರಿಂದ

4. ನನ್ನ ಮದುವೆ ಆಗಿ 16 ವರ್ಷಗಳು ಆಗಿರುತ್ತವೆ ಎಂದರೆ ಸರಿ. ನನ್ನ ಮಗನಿಗೆ 12 ವರ್ಷಗಳು ಆಗಿರುತ್ತವೆ. ನನ್ನ ಗಂಡ ಸತ್ತ ನಂತರ ನಾನು ನನ್ನ ಮಗ ಒಂದು ರೂಮಿನಲ್ಲಿ ಇದ್ದೇವು. ನನ್ನ ಭಾವ ಶರಣಪ್ಪ ಮತ್ತು ಆತನ ಹೆಂಡತಿ ಜ್ಯೋತಿ ಈತನ ಮನೆ ನನ್ನ ಮನೆ ನನ್ನ ಮನೆಯ ಇನ್ನೊಂದು ಕೋಣೆಯಲ್ಲಿ ವಾಸವಾಗಿದ್ದನು.  ನನ್ನ ನಾದಿನಿಯಾದ ದೇವಿಂದ್ರಮ್ಮನ ಮನೆ ನನ್ನ ಮನೆಯಿಂದ ನಡೆದುಕೊಂಡು ಹೋದರೆ 20 ನಿಮಿಷ ಬೇಕಾಗುತ್ತದೆ. ನಮ್ಮ ದೇವಿಂದ್ರಮ್ಮನ ಮನೆ ಐದು ಅಂತರದಲ್ಲಿ ಇರುತ್ತದೆ. ಚಾಸಾ-25 ದೇವಿಂದ್ರಮ್ಮ ಮತ್ತು ಆಕೆಯ ಮಗ ಒಂದೆ ರೂಮಿನಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಭಾವನಾದ ಚಾಸಾ-16 ಶರಣಪ್ಪನಿಗೆ ಯಾವುದೇ ಮಕ್ಕಳು ಇರುವುದಿಲ್ಲ. ನನ್ನ ಮಗ ದಿನಾಲೂ ಚಪ್ಪಲಿ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದನು ಮತ್ತು ಚಪ್ಪಲಿ ಹಾಕಿಕೊಂಡು ಮನೆಗೆ ಬರುತ್ತಿದ್ದ. ಚಾಸಾ-16 ರಿಂದ 21, 23, 25 ಎಲ್ಲರೂ ಅಕ್ಕಪಕ್ಕದ ಮನೆಯಲ್ಲಿ ವಾಸವಾಗಿದ್ದೇವು ಎಂದರೆ ಸರಿ. ಬೆಳಿಗ್ಗೆ ಎದ್ದ ನಂತರ ಒಬ್ಬರಿಗೊಬ್ಬರೂ ಮುಖ ನೋಡಿಕೊಳ್ಳುತ್ತಿದ್ದರು ಮತ್ತು  ಎಲ್ಲರೂ ಸೇರಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದೇವು ಎಂದರೆ ಸರಿ. ರಾತ್ರಿ ಊಟ ಮಾಡಿದ ನಂತರ ಒಂದು ಗಂಟೆ ಎಲ್ಲರೂ ಕುಳಿತು ಹರಟೆ ಹೊಡೆಯುತ್ತಿದ್ದೇವು ಎಂದರೆ ಸರಿ.

5. ಹನುಮಾನ ದೇವರ ಗುಡಿಯಿಂದ ನನ್ನ ಮಗ ಕಾಣೆಯಾದ ಬಗ್ಗೆ ಪ್ರಚಾರ ಮಾಡಿದರು ಎಂದು ನನ್ನ ದೂರಿನಲ್ಲಿ ಮತ್ತು ಪುರವಣಿ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.  ರಾತ್ರಿ 8.00 ಗಂಟೆಗೆ ನನ್ನ ಮಗ ಕಾಕಲವಾರ ಗ್ರಾಮದ ಚಾಸಾ-27 ಸದಾಶಿವರಡ್ಡಿ ಮನೆಯಲ್ಲಿ ಎತ್ತು ಕಟ್ಟುವ ಕೋಣೆಯಲ್ಲಿ ಇರುತ್ತಾನೆ ಎಂದು ಗೊತ್ತಾಯಿತು, ನನ್ನ ಮಗನ ಜೊತೆ ಅಬ್ದುಲ್ ನಬೀ ಸಾಬ ಎಂದರೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಇದದ್ದನ್ನು ಎಂದು ಗೊತಾಯಿತು, ಈ ಇಬ್ಬರೂ ಹೋಗುವುದನ್ನು ಚಾಸಾ-25

ದೇವಿಂದ್ರಮ್ಮ, ಚಾಸಾ-19 ಮಾಣಿಕಮ್ಮ, ಚಾಸಾ-23 ರಾಜು ರವರು ಸಹ ನೋಡಿರುತ್ತಾರೆ ಎಂದು ನನ್ನ ದೂರಿನಲ್ಲಿ ಆಗಲಿ ಪುರವಣಿ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಇದನ್ನುಇದೇ ಪ್ರಥಮ ಬಾರಿಗೆ ಇದೇ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-21 ಯಲ್ಲಪ್ಪ ಈತನು ನನ್ನ ಮಗನನ್ನು ಆರೋಪಿ ಅಬ್ದುಲ್ ನಬೀ ಇವರು ಚಾಸಾ-27 ಸದಾಶಿವರಡ್ಡಿ ಯವರ ಮನೆಗೆ ಕರೆದುಕೊಂಡು ಹೋಗಿ ಕೊಂದು ಹಾಕಿರುತ್ತಾನೆ ಎಂದು ತಿಳಿಸಿರುತ್ತಾನೆ ಎಂದು ನನ್ನ ದೂರಿನಲ್ಲಿ ಆಗಲಿ ಪುರವಣಿ ಹೇಳಿಕೆಯಲ್ಲಿ ಹೇಳಿದಿರುವುದಿಲ್ಲ ಎಂದರೆ ಸರಿಯಲ್ಲ. ಇದನ್ನು ಇದೇ ಪ್ರಥಮ ಬಾರಿಗೆ ಇದೇ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಮೂಗು ಮತ್ತು ಬಾಯಿ ಒತ್ತಿ ಹಿಡಿದು ಆರೋಪಿ ಕೊಲೆ ಮಾಡಿರುತ್ತಾನೆ ಎಂದು ಚಾಸಾ-21 ಇವರು ನನಗೆ ತಿಳಿಸಿದರು ಎಂದು ನನ್ನ ದೂರಿನಲ್ಲಿ ಆಗಲಿ ಪುರವಣಿ ಹೇಳಿಕೆಯಲ್ಲಿ ಹೇಳಿದಿರುವುದಿಲ್ಲ ಎಂದರೆ ಸರಿಯಲ್ಲ. ಇದನ್ನು ಇದೇ ಪ್ರಥಮ ಬಾರಿಗೆ ಇದೇ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಿ.ಪಿ.3 ರಿಂದ 10 ಎಲ್ಲಿ ತೆಗೆದಿರುತ್ತಾರೆ ಯಾರು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ದೇಹದ ಮೇಲೆ ಯಾವುದೇ ರೀತಿಯ ಗಾಯಗಳು ಯು.ಡಿ. ಆರ್, ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಯು.ಡಿ.ಆರ್. ನ ಭಾಗವನ್ನು **ನಿ.ಡಿ.1** ಎಂದು ಗುರುತಿಸಲಾಯಿತು.

6. ನನ್ನ ಭಾವನ ಕಡೆಯಿಂದ ಆರೋಪಿತನ ಪರಿಚಯ ಇರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವರ್ಷದ ಹಿಂದೆ ಸಂಜೆ 5.00 ಗಂಟೆಗೆ ಕಾಕಲವಾರ ಗ್ರಾಮದಲ್ಲಿ ನನ್ನ ಮಗ ಶಾಲೆಗೆ ಹೋಗಿ ಬರುತ್ತಿದ್ದ ನನ್ನ ಮಗ ನನ್ನಗಂಡನ ತಂಗಿಯ ಮನೆಗೆ ಚಪ್ಪಲಿ ಹಾಕಿಕೊಂಡು ಹೋಗಿಬರಲು ಹೋಗಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನನ್ನ ಮಗ ಮನೆಗೆ ಬಂದಿಲ್ಲ ಎಂದು ನಾನು ಹುಡುಕಲು ಪ್ರಯತ್ನ ಮಾಡಿರುತ್ತೇನೆ  ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಾನ ದೇವರ ಗುಡಿಯಿಂದ ನನ್ನ ಮಗ ಕಾಣೆಯಾದ ಬಗ್ಗೆ ಪ್ರಚಾರ ಮಾಡಿದರು  ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ರಾತ್ರಿ 8.00 ಗಂಟೆಗೆ ನನ್ನ ಮಗ ಕಾಕಲವಾರ ಗ್ರಾಮದ ಚಾಸಾ-27

ಸದಾಶಿವರಡ್ಡಿ ಮನೆಯಲ್ಲಿ ಎತ್ತು ಕಟ್ಟುವ ಕೋಣೆಯಲ್ಲಿ ಇರುತ್ತಾನೆ ಎಂದು ಗೊತ್ತಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ನನ್ನ ಮಗನ ಆರೋಪಿ ಅಬ್ದುಲ ನಬೀ ಇದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಇಬ್ಬರೂ ಹೋಗುವುದನ್ನು ಚಾಸಾ-25, 19, 23 ರವರು ಸಹ ನೋಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಚಾಸಾ-27 ರವರ ಮನೆಯ ದನಗಳು ಕಟ್ಟುವ ಕೋಣೆಯಲ್ಲಿ ಸತ್ತಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ಚಾಸಾ-21 ಈತನು ನನ್ನ ಮಗನನ್ನು ಆರೋಪಿ ಅಬ್ದುಲ ನಬಿ ಇವರು ಚಾಸಾ-27 ರವರ ಮನೆಗೆ ಕರೆದುಕೊಂಡು ಹೋಗಿ ಕೊಂದು ಹಾಕಿರುತ್ತಾನೆ ಎಂದು ತಿಳಿಸಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-19, 23, 21 ಇವರು ಮಾತು ಕೇಳಿ ಸುಳ್ಳು ಫಿರ್ಯಾದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಚಾಸಾ-30 ರವರಿಗೆ ನಾನು ಹೇಳಿ ದೂರನ್ನು ಬರೆಯಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಕಾಕಲವಾರ ಗ್ರಾಮದ ಚಾಸಾ-27 ರವರ ಮನೆಯ ದನದ ಕೊಟ್ಟಿಗೆಯಲ್ಲಿ ನನ್ನ ಮಗನ ಶವಪಂಚನಾಮೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಮತ್ತು ನನ್ನ ಸಮಕ್ಷಮ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಪಂಚನಾಮೆ ಮಾಡಿ ಭಾವಚಿತ್ರ ತೆಗೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮಗನನ್ನು ಕೊಲೆ ಮಾಡಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೇಳಿಯ ನನ್ನ ತಾಯಿಯ ಮನೆಯಲ್ಲಿ ಇರುತ್ತೇನೆ. ನನ್ನ ಆಸ್ತಿಯನ್ನು ನನ್ನ ನಾದಿನಿ ಮಗ ರಾಜು ಎನ್ನುವರಿಗೆ ಹೋಗುತ್ತದೆ ಎಂದರೆ ಇರೋದೆ ಅವರು ಒಬ್ಬರು ಅವರಿಗೆ ಹೋಗುತ್ತದೆ ಎಂದು ನುಡಿಯುತ್ತಾರೆ. ಆತನೇ ನನ್ನ ಊರು ಬಿಡಿಸಿ ನನ್ನ ತವರುಮನೆಗೆ ಕಳುಹಿಸಿದ್ದಾನೆ ಎಂದರೆ ಸರಿಯಲ್ಲ. ನನ್ನ ಮಗನ ಸಾವಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲದಿದ್ದರು ಸಹ ಆರೋಪಿತನ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.